ಓ ಎಸ್ ನಂ 49/2019

ಡಿ. ಡಬ್ಲ್ಯೂ ಃ 1

ದಿಃ 23.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಎಸ್ ಜಿ ಆರ್ ವಕೀಲರಿಂದ ಃ

ನಿ ಪಿ 5 ವಾದಿ ನೀಡಿರುವ ನೋಟೀಸ್ ನಿ ಪಿ 4 ಕ್ಕೆ ನಾನು ನೀಡಿರುವ ಪ್ರತ್ಯುತ್ತರ ಎಂದರೆ ಸರಿ. ನಿ ಪಿ 5 ಪ್ರತ್ಯುತ್ತರದಲ್ಲಿರುವ ವಿಷಯಗಳನ್ನು ನಮ್ಮ ವಕೀಲರಿಗೆ ನಾನೇ ತಿಳಿಸಿರುತ್ತೇನೆ. ನಿ ಪಿ 5 ರಲ್ಲಿ ಬರೆದಿರುವ ಎಲ್ಲ ವಿಚಾರಗಳನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದು, ಅದರಲ್ಲಿ ಇರುವ ವಿಚಾರಗಳು ಸತ್ಯವಾಗಿರುತ್ತವೆ.

ನಾನು ನಿ ಪಿ 5 ರಲ್ಲಿ ನೀಡಿರುವ ಪ್ರತ್ಯುತ್ಯರದಲ್ಲಿ ತಡೆಯುವುದಕ್ಕೆ ಆಗದೇ ಇರುವ ಸಂದರ್ಭದಲ್ಲಿ ನಿ ಪಿ 1 ಕ್ಕೆ ಸಹಿ ಮಾಡಿರುತ್ತೇನೆ ಎಂದು ಹೇಳಿದ್ದೇನೆ ಎಂದರೆ ಸರಿ. ನನ್ನ ಲಿಖಿತ ಹೇಳಿಕೆಯನ್ನು ನ್ಯಾಯಾಲಯ ಕ್ಕೆ ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಅದೇ ರೀತಿ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ ಎಲ್ಲ ವಿಚಾರಗಳನ್ನು ನಮ್ಮ ವಕೀಲರಿಗೆ ನಾನೇ ಹೇಳಿ ಬರೆಯಿಸಿರುತ್ತೇನೆ. ನಿ ಪಿ 5 ರಲ್ಲಿ ನಾನೇ ನಿ ಪಿ 1 ರಲ್ಲಿ ಸಹಿ ಮಾಡಿರುತ್ತೇನೆಂದು ಹೇಳಿದ್ದು, ನನ್ನ ಲಿಖಿತ ಹೇಳಿಕೆ ಮತ್ತು ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ನಿ ಪಿ 1 ನ್ನು ಸೃಷ್ಟಿ ಮಾಡಿರುತ್ತಾರೆ ಎಂದು ನಾನು ಅನುಕೂಲಕ್ಕೆ ತಕ್ಕಂತೆ ಸುಳ್ಳು ಬರೆಯಿಸಿರುತ್ತೇನೆಂದರೆ ನಾನು ಸುಳ್ಳು ಬರೆಯಿಸಿರುವುದಿಲ್ಲ.

ದಾವಾ ಸ್ವತ್ತು ನಮ್ಮ ಕುಟುಂಬಕ್ಕೆ ಸೇರಿದ ಸ್ವತ್ತು ಎಂದರೆ ಸಾಕ್ಷಿ ಅದು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ ಎಂದರೆ ನೀಡಿರುತ್ತೇನೆ. ನಮ್ಮ ತಂದೆ ದಿನಾಂಕಃ 24.09.2015 ರಲ್ಲಿ ತೀರಿಕೊಂಡಿರುತ್ತಾರೆ. ತಕರಾರು ಸಲ್ಲಿಸಲು ಈ ದಾವೆಯಲ್ಲಿ ನಾನು, ಹನುಮಂತರಾಯಪ್ಪ ಮತ್ತು ಸಿದ್ದಲಕ್ಷ್ಮಮ್ಮ ನವರು ವಕೀಲರಿಗೆ ಮಾಹಿತಿ ನೀಡಿರುತ್ತೇವೆ. ತಕರಾರಿಗೆ ಹನುಮಂತರಾಯಪ್ಪ, ಸಿದ್ದಲಕ್ಷ್ಮಮ್ಮ ಮತ್ತು ನಾನು ಸಹಿ ಮಾಡಿರುತ್ತೇವೆ. ತಕರಾರನ್ನು ಸಾಕ್ಷಿಗೆ ತೋರಿಸಿ ಸಾಕ್ಷಿ ತಕರಾರನ್ನು ನೋಡಿ ನಾನು ಒಬ್ಬನೇ ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಪ್ರಶ್ನೆಯನ್ನು ವಕೀಲರ ಕೋರಿಕೆಯ ಮೇರೆಗೆ ರೇಕಾರ್ಡ್ ಮಾಡಲಾಗಿರುತ್ತದೆ.

ನಾನು ಹನುಮಂತರಾಯಪ್ಪ ಮತ್ತು ಸಿದ್ದಲಕ್ಷ್ಮಮ್ಮ ನವರನ್ನು ಈ ದಾವೆಯ ಬಗ್ಗೆ ಗೊತ್ತಿಲ್ಲದೇ ವಕೀಲರ ಕಚೇರಿಗೆ ಕರೆದುಕೊಂಡು ಹೋಗಿ ಅಲ್ಲಿ ವಕೀಲರಿಗೆ ಹೇಳಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವಕೀಲರ ಹತ್ತಿರ ಹನುಮಂತರಾಯಪ್ಪ ಮತ್ತು ಸಿದ್ದಲಕ್ಷ್ಮಮ್ಮ ರವರನ್ನು ಕರೆದುಕೊಂಡು ಹೇಳಿಸಿರುವ ವಿಚಾರ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ.

ಅಂಜನಾಮೂರ್ತಿ ರವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಾನು ಅಂಜನಾಮೂರ್ತಿ ರವರನ್ನು ಕರೆಯಿಸಿ ನಮ್ಮ ಪರವಾಗಿ ವಿಚಾರಣೆ ಮಾಡಿಸುತ್ತೀರಾ ಎಂದರೆ ಸಾಕ್ಷಿ ಈಗಾಗಲೇ ವಿಚಾರಣೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಅಂಜನಾ ಮೂರ್ತಿ ರವರು ನಿಪಿ 1 ರಂತೆ ಹಣ ಪಡೆದು, ಪ್ರತಿವಾದಿಗಳಿಗೆ ಕರಾರುಪತ್ರವನ್ನು ಬರೆದುಕೊಟ್ಟಿರುವುದಾಗಿ ಹೇಳಿರುತ್ತಾರೆ ಎಂದರೆ ಸರಿ ಸಾಕ್ಷಿ ಮುಂದುವರೆದು ಅಂಜನಾಮೂರ್ತಿ ರವರು ಒಬ್ಬರು ಮಾತ್ರ ಆ ರೀತಿ ಸಾಕ್ಷಿ ನುಡಿದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪ್ರತ್ಯುತ್ತರ ನೀಡಿದ ನಂತರ ಕಾನೂನಿನ ಕ್ರಮಗಳನ್ನು ಪಡೆದಿರುತ್ತೇನೆ. ನಾನು ಕರಾರುಪತ್ರದ ಮೇಲೆ ನಾನು ಏನೇನು ಕಾನೂನು ಕ್ರಮ ತೆಗೆದುಕೊಂಡಿರುತ್ತೇನೆ ಎಂದರೆ ನಾನು ಏನು ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

ಸಿದ್ದಲಕ್ಷ್ಮಮ್ಮ ಮತ್ತು ಹನುಮಂತರಾಯಪ್ಪ ನವರನ್ನು ನಾನು ವಿಚಾರಣೆ ಮಾಡಿಸುತ್ತೇನೆ. ಸಿದ್ದಲಕ್ಷ್ಮಮ್ಮ ಮತ್ತು ಹನುಮಂತರಾಯಪ್ಪ ರವರು ಈ ದಾವೆಯಲ್ಲಿ ಯಾವುದೇ ತಕರಾರು ಹಾಕಿರುವುದಿಲ್ಲ ಎಂದರೆ ಸರಿ. ಸಿದ್ದಲಕ್ಷ್ಮಮ್ಮ ಮತ್ತು ಹನುಮಂತರಾಯಪ್ಪ ರವರಿಗೂ ಸಹ ನ್ಯಾಯಾಲಯದಿಂದ ಸಮನ್ಸ ಜಾರಿಯಾಗಿರುತ್ತದೆ. ಸಿದ್ದಲಕ್ಷ್ಮಮ್ಮ ಮತ್ತು ಹನುಮಂತರಾಯಪ್ಪ ನವರ ಹೆಬ್ಬೆಟ್ಟಿನ ರುಜುಗಳನ್ನು ತಜ್ಞರಿಗೆ ಪರಿಶೀಲನೆ ಮಾಡಲು ಕಳುಹಿಸಿದರೆ ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ನಾನು ನಿ ಪಿ 1 ರ ಕರಾರುಪತ್ರ ಬರೆದು, ಷರಾ ಬರೆದು, ಹಣ ಪಡೆದು, ಈಗ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಮುಂದುವರೆದ ಪಾಟೀ ಸವಾಲಿಗಾಗಿ ಎಸ್ ಜಿ ಆರ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ**